ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	546 (704)
2.	ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
3.	ಉತ್ತರಿಸಬೇಕಾದ ದಿನಾಂಕ	:	04-03-2021
4.	ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬಿ.ಎಂ.ಆರ್.ಸಿ.ಎಲ್.ಯಿಂದ ನಡೆಯುತ್ತಿರುವ ಕಾಮಗಾರಿಗಳಾವುವು: (ಹಾಲಿ ಮೆಟ್ರೋ ಸೇವೆಗಳ ವಿವರ ಒದಗಿಸುವುದು)	ಬಿ.ಎಂ.ಆರ್.ಸಿ.ಎಲ್.ಯಿಂದ ನಡೆಯುತ್ತಿರುವ ಕಾಮಗಾರಿಗಳು ಮೆಟ್ರೋ ಯೋಜನೆ ಹಂತ-2, 2ಎ ಹಾಗೂ ಹಂತ-2ಬಿ. **ಹಾಲಿ ಮೆಟ್ರೋ ಸೇವೆಗಳ ವಿವರ:** ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-1 ರಲ್ಲಿ 42.3 ಕಿ.ಮೀ.ಗಳು ಹಾಗೂ ಹಂತ-2 ರಲ್ಲಿ 6 ಕಿ.ಮೀಗಳು ಒಟ್ಟು 48.3 ಕಿ.ಮೀಗಳ ಉದ್ದದಷ್ಟು ಹಾಲಿ ಮೆಟ್ರೋ ಸೇವೆಗಳಲ್ಲಿ ತೊಡಗಿಸಿಕೊಂಡಿರುತ್ತದೆ.
ಆ)	ಯಾವ ಮಾರ್ಗದಲ್ಲಿ ಹೊಸದಾಗಿ ಮೆಟ್ರೋ ಸಂಚಾರವನ್ನು ಪ್ರಾರಂಭಿಸಲು ನಿರ್ಧರಿಸಲಾಗಿದೆ: ಇದಕ್ಕಾಗಿ ಹಣ ಎಷ್ಟು ಬೇಕಾಗುತ್ತದೆ? (ವಿವರವಾದ ಮಾಹಿತಿ ನೀಡುವುದು)	ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2 ರ ಮಾರ್ಗದ ಸಂಚಾರವನ್ನು ಪ್ರಾರಂಭಿಸಲು ಯೋಜಿಸಲಾದ ವಿವರಗಳು ಹಾಗೂ ಇದಕ್ಕೆ ಬೇಕಾಗುವ ಹಣದ ವಿವರದ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.

ಕಡತ ಸಂಖ್ಯೆ: ನಅಇ 47 ಪಿ.ಆರ್.ಜೆ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಅನುಬಂಧ-1

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ಮಾರ್ಗದ ಹೆಸರು	ಮಾರ್ಗದ ಉದ್ದ (ಕಿ.ಮೀ.ಗಳಲ್ಲಿ)	ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ)	ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸುವ ಗುರಿ
ದಕ್ಷಿಣ ವಿಸ್ತರಣೆ - ರೀಚ್-4 ಎಕ್ಸ್‌ಟೇನ್ಷನ್ ಯಲಚೇನಹಳ್ಳಿಯಿಂದ ಸಿಲ್ಕ್ ಸಂಸ್ಥೆವರೆಗೆ	6.00	2,362.6	ಜನವರಿ 2021ರಲ್ಲಿ ಮುಕ್ತಗೊಳಿಸಲಾಗಿದೆ.
ಪಶ್ಚಿಮ ವಿಸ್ತರಣೆ - ರೀಚ್-2 ಎಕ್ಸ್‌ಟೇನ್ಷನ್ ಮೈಸೂರು ರಸ್ತೆಯಿಂದ ಕೆಂಗೇರಿ - ಛಲ್ಲಘಟ್ಟದವರೆಗೆ	9.14	2,018.8	ಜೂನ್ 2021 / ಮಾರ್ಚ್ 2022
ಉತ್ತರ ವಿಸ್ತರಣೆ - ರೀಚ್-3 ಎಕ್ಸ್‌ಟೇನ್ಷನ್ ನಾಗಸಂದ್ರದಿಂದ ಮಾದಾವರದವರೆಗೆ	2.96	1,147.4	ಸೆಪ್ಟೆಂಬರ್-2022
ಪೂರ್ವ ವಿಸ್ತರಣೆ - ರೀಚ್-1 ಎಕ್ಸ್‌ಟೇನ್ಷನ್ ಬೈಯಪ್ಪನಹಳ್ಳಿಯಿಂದ – ವೈಟ್‌ಫೀಲ್ಡ್‌ವರೆಗೆ	17.63	5,449.4	ಜೂನ್-2023
ಎಲೆಕ್ಟ್ರಾನಿಕ್ ಸಿಟಿ ಲೈನ್ - ರೀಚ್-5 ಹೊಸ ಮಾರ್ಗ ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರದವರೆಗೆ	20.23	6,900.0	ಜೂನ್ -2023
ಬನ್ನೇರುಘಟ್ಟ ರಸ್ತೆ ಮಾರ್ಗ - ರೀಚ್-6 ಹೊಸ ಮಾರ್ಗ ಕಾಳೇನ ಅಗ್ರಹಾರದಿಂದ ನಾಗವಾರದವರೆಗೆ	23.26	12,816.9	ಮಾರ್ಚ್-2025